**ಹೇ** ಪ್ರಾಣವೇ, ನೀನೇ ಪ್ರಜಾಪತಿ. ಮಾತಾಪಿತೃಗಳಿಗೆ ಅನುರೂಪನಾದ ಸಂತಾನ ರೂಪಿಯೂ ನೀನೇ. ಎಲ್ಲ ಜೀವ ರಾಶಿಗಳೂ ನಿನ್ನ ಕೃಪೆಗಾಗಿ ನಿನಗೆ ಕಾಣಿಕೆಗಳನ್ನು ಅರ್ಪಿಸುತ್ತವೆ.

★★★

ರಾತ್ರಿಯ ಚಳಿಯನ್ನು ಹೊಡೆದೋಡಿಸಲು ಬೆಂಕಿಯನ್ನೆಬ್ಬಿಸಿ, ಅದರ ಸುತ್ತ ಹತ್ತಾರು ಜನ ಕುಳಿತು ತದೇಕಚಿತ್ತದಿಂದ ಮೇಲೇಳುತ್ತಿದ್ದ ಅಗ್ನಿಯ ಜ್ವಾಲೆಯನ್ನು ನೋಡುತ್ತಿದ್ದರು. ವಿಶಾಲವಾದ ಮೈದಾನದಲ್ಲಿ, ಅದಕ್ಕೆ ಅಂಟಿಕೊಂಡ ಕಾಡಿನಲ್ಲಿ, ಅದರ ಅಂಚಿನಲ್ಲಿ ಮೇಲಕ್ಕೆದ್ದಿದ್ದ ಬೆಟ್ಟದ ಮೇಲೆ, ಕತ್ತಲನ್ನು ಭೇದಿಸುವ ಯತ್ನ ಮಾಡುತ್ತಾ ಹೀಗೆ ಮೇಲೆದ್ದ ಜ್ವಾಲೆಗಳು ಹರಡಿ ನಿಂತಿದ್ದವು. ಅಲ್ಲಲ್ಲಿ ಸೇರಿಸಿ ತಂದಿದ್ದ ಕಡ್ಡಿಯ ತುಂಡುಗಳನ್ನು ಪುರುಳೆಗಳನ್ನು ಮೇಲೇಳುತ್ತಿದ್ದ ಬೆಂಕಿಗೆ ಹಾಕುವುದರಲ್ಲಿ ಚಿಕ್ಕ ಹುಡುಗರು ನಿರತರಾಗಿದ್ದರು.

ಶಂಭುವಿನ ಮುಖ ಈ ಅಗ್ನಿ ಪ್ರಭೆಯಲ್ಲಿ ಪ್ರಕಾಶಿಸುತ್ತಿತ್ತು. ಅವನ ಮುಖದ ಮೇಲೆ ವ್ರತ ನಿಷ್ಠೆಯ ಕುರುಹಾಗಿ ಬೆಳೆದ ಗಡ್ಡ ಮಿಂಚುತ್ತಿತ್ತು. ಮಧ್ಯ ವಯಸ್ಕನಾದ ಶಂಭುವಿನ ಮುಖದ ಮೇಲೆ ಬೆಳೆದ ಈ ಗಡ್ಡದ ನಡುವೆ ಅಲ್ಲಲ್ಲಿ ಕೆಲವು ಕಡೆ ನರೆತ ಕೂದಲು ಇಣುಕಿ ಹಾಕುತ್ತಾ ಅವನಿಗೆ ಗಾಂಭೀರ್ಯದ ನಿಲುವನ್ನು ಕೊಟ್ಟಿತ್ತು.

ಶಂಭುವಿನ ದೃಷ್ಟಿ ಬೆಂಕಿಯಿಂದಾಚೆ ನೆಟ್ಟಿತ್ತು. ಅವನ ಇಬ್ಬರು ಮಕ್ಕಳು ಬೆಂಕಿಗೆ ಪುರುಳೆಗಳನ್ನು ಹಾಕುತ್ತಾ, ಕೆಂಡವನ್ನು ಕೆದಕುತ್ತಾ, ಕೈಯನ್ನು ಉಜ್ಜಿಕೊಳ್ಳುತ್ತಾ ಆನಂದಿಸುತ್ತಿದ್ದರು. ಅವರಿಬ್ಬರನ್ನು ನೋಡುತ್ತಾ ಶಂಭುವಿನ ಮುಖದ ಮೇಲೆ ಮುಗುಳ್ನಗೆ ಮೂಡಿತು. ತನ್ನಿಬ್ಬರು ಮಕ್ಕಳನ್ನು ತನ್ನೆರಡು ಕಣ್ಣುಗಳ ಹಾಗೆ ಜೋಪಾನವಾಗಿ ಕಾದುಕೊಂಡಿದ್ದ ಶಂಭು. ಬಹಳ ಚೂಟಿಯಾದ, ಬುದ್ಧಿವಂತರಾದ ಹುಡುಗರಿಬ್ಬರನ್ನು ಕಂಡಾಗಲೆಲ್ಲ ಅವನ ಮನಸ್ಸಿನಲ್ಲಿ ಅವರ್ಣನೀಯವಾದ ಆನಂದವಾಗುತ್ತಿತ್ತು.

ಹೋದ ವರ್ಷದಂತೆ ಈ ವರ್ಷವೂ ತನ್ನೊಡನೆ ಇಬ್ಬರು ಮಕ್ಕಳನ್ನು ಕರೆದುಕೊಂಡು ಬಂದಿದ್ದ. ಮೊದಮೊದಲು ಅವನಿಗೆ ತಾನು ಮಾಡುತ್ತಿರುವುದು ಸರಿಯೇ ಎನ್ನಿಸಿತು. ಕಾಡಿನದಾರಿ, ದಿನಗಟ್ಟಲೆ ನಡೆಯಬೇಕು, ಅನ್ನಾಹಾರ ಸರಿಯಾಗಿ ಸಿಗುವುದಿಲ್ಲ. ಇಷ್ಟೆಲ್ಲಾ ಕಷ್ಟಕ್ಕೆ ತನ್ನ ಮಕ್ಕಳನ್ನು ಗುರಿಮಾಡುವುದು ಸರಿಯೇ? ಶಂಭುವಿನ ಹೆಂಡತಿ ತುಸುಕೋಪದಿಂದಲೇ ಹುಡುಗರನ್ನು ಕಳುಹಿಸಿಕೊಟ್ಟಿದ್ದಳು.

ಆದರೆ ಹೆಂಡತಿ ಕೋಪಿಸಿಕೊಂಡಾಗ ಶಂಭು ಮತ್ತಷ್ಟು ದೃಢನಾಗಿದ್ದ. ಹೆಂಡತಿಗೆ ನಂಬಿಕೆಯಿಲ್ಲ. ಅವಳಿಗೆ ಜೀವನದಲ್ಲಿ ಒಳಿತನ್ನು ಕಾಣಲು ಅಸಾಧ್ಯ. ಅವಳ ನೆರಳಿನಲ್ಲಿ ತನ್ನ ಮಕ್ಕಳು ಬೆಳೆದರೆ ಅವರಿಗೂ ಅಪನಂಬಿಕೆ ಬಂದೀತು. ಈಗನಿಂದಲೇ ಅವರ ಮನಸ್ಸನ್ನು ಪರಿವರ್ತಿಸಬೇಕು. ಈ ಭವ್ಯತೆಯನ್ನು ಅವರಿಗೆ ತೋರಿಸಬೇಕು. ಕೋಟ್ಯಂತರ ಜನ ಆನಂದಿಸುವುದನ್ನು ಇವರೂ ಆನಂದಿಸಬೇಕು.

ಮಕ್ಕಳು ಇಬ್ಬರೂ ಕಾಲದ ಪರಿವೆಯಿಲ್ಲದೆ, ಕತ್ತಲು ಮುಸುಕಿದ್ದರೂ ನಿದ್ರೆಯ ಯೋಚನೆಯಿಲ್ಲದೆ ಗುಸಗುಸನೆ ಮಾತನಾಡಿಕೊಳ್ಳುತ್ತಾ, ಬೆಂಕಿಯನ್ನು ಕೆದಕುತ್ತಾ, ನಗುತ್ತಿದ್ದರು. ಮಕ್ಕಳ ಮುಖವನ್ನು ನೋಡಿದಾಗ ಶಂಭುವಿಗೆ ತನ್ನ ನಂಬಿಕೆ ಮತ್ತಷ್ಟು ಬಲವಾದಂತೆ ಅನ್ನಿಸಿತು. ದಿನಕ್ಕೆ ಒಂದು ಬಾರಿ ಮಾತ್ರ ಆಹಾರ, ದಿನವೆಲ್ಲಾ ಸತತವಾಗಿ ನಡೆತ, ಅವಿಚ್ಛಿನ್ನವಾದ ವ್ರತನಿಯಮ ಪಾಲನೆ. ಇಷ್ಟೆಲ್ಲಾ ಮಾಡಿಯೂ ಹುಡುಗರು ಆನಂದದಿಂದಿದ್ದಾರೆ